**DAY & DATE: FRIDAY, OCTOBER 10th, 2025**

**Matter: Inauguration of First Year B.E. Classes, 2025**

**As appeared in the Newspapers:**

**VIJAYA KARNATAKA**
(Nation/World, Page No. 09)

VK ವಿಜಯ ಕರ್ನಾಟಕ e-paper

# ವಿದ್ಯಾರ್ಥಿಗಳು ಭವಿಷ್ಯದ ಆಭರಣಗಳು

## ಬಿಎನ್‌ಎಂಐಟಿ ಕಾರ್ಯಕ್ರಮದಲ್ಲಿ ಸ್ವಾಮಿ ಜಪಾನಂದ ಬಣ್ಣನೆ




**ಬೆಂಗಳೂರು:** ವಿದ್ಯಾರ್ಥಿಗಳು ಭವಿಷ್ಯದ ಭಾರತದ ಆಭರಣಗಳು. ನಿಮ್ಮ ವೃತ್ತಿಜೀವನವನ್ನು ರೂಪಿಸಿಕೊಳ್ಳುವುದರೊಂದಿಗೆ ಸಾಧ್ಯವಾದಷ್ಟು ಸಮಾಜಕ್ಕೆ ಕೊಡುಗೆ ನೀಡಲು ಯತ್ನಿಸಿ ಎಂದು ಎಂದು ಪಾವಗಡದ ರಾಮಕೃಷ್ಣ ಸೇವಾಶ್ರಮದ ಸ್ವಾಮಿ ಜಪಾನಂದ ಕರೆ ನೀಡಿದರು.

ಅವರು ಬಿಎನ್‌ಎಂ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯಲ್ಲಿ (ಬಿಎನ್‌ಎಂಐಟಿ) ನಡೆದ ಮೊದಲ ವರ್ಷದ ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಏರ್ಪಡಿಸಿದ್ದ ಸ್ವಾಗತ ಸಮಾರಂಭದಲ್ಲಿ ಮಾತನಾಡಿದರು. ''ಅತ್ಯುತ್ತಮ ಮೂಲಸೌಕರ್ಯ ಹೊಂದಿರುವ ಕಾಲೇಜಿನಲ್ಲಿ ಅಧ್ಯಯನ ಮಾಡುವುದು ನಿಮ್ಮ ಅದೃಷ್ಟ. ವ್ಯಕ್ತಿಯು ಜೀವನದಲ್ಲಿ ಎಷ್ಟೇ ಎತ್ತರಕ್ಕೆ ಏರಲಿ, ಅವರು ತಮ್ಮ ಬೇರುಗಳನ್ನು ಎಂದಿಗೂ ಮರೆಯಬಾರದು. ಪ್ರಾಪಂಚಿಕ ಸುಖವಷ್ಟೇ ಮುಖ್ಯವಲ್ಲ, ವಿದ್ಯಾರ್ಥಿಗಳು ಜೀವನದಲ್ಲಿ ಮಾನವೀಯ ಮೌಲ್ಯಗಳನ್ನು ಬೆಳೆಸಿಕೊಳ್ಳಬೇಕು,'' ಎಂದು ಪ್ರತಿಪಾದಿಸಿದರು. ಬಿಎನ್‌ಎಂಐಟಿ ಡೀನ್ ಪ್ರೊ.ಈಶ್ವರ್ ಎನ್. ಮಾನೆ ಮಾತನಾಡಿ, ''ಯಶಸ್ಸು ಮತ್ತು ವೈಫಲ್ಯ ಜೀವನದ ಭಾಗವಾಗಿದೆ. ವಿಫಲವಾದಾಗ ಕುಗ್ಗದೆ ಮುಂದಡಿ ಇಡಬೇಕು,'' ಎಂದು ಕರೆ ನೀಡಿದರು. ಕಾರ್ಯಕ್ರಮದಲ್ಲಿ ಪ್ರೊ. ಟಿ. ಜೆ. ರಾಮಮೂರ್ತಿ, ನಿರ್ದೇಶಕ ಡಾ. ಎಸ್.ವೈ ಕುಲಕರ್ಣಿ ಹಾಗೂ ಉಪನಿರ್ದೇಶಕ ಜಿ.ಎನ್. ಕೃಷ್ಣಮೂರ್ತಿ ಉಪಸ್ಥಿತರಿದ್ದರು.